# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಎಂ.ಕೆ. ನಲವಡಿ | ಪಿಡಬ್ಲ್ಯೂ.17 |
| ತಂದೆಯ ಹೆಸರು | ಃ | ಕರಬಸಪ್ಪ | ಸಿಡಬ್ಲ್ಯೂ.40 |
| ವಯಸ್ಸು | ಃ | 61 ವರ್ಷ | ಪ್ರಮಾಣ ವಚನ ಬೋಧಿಸಿದ |
| ಉದ್ಯೋಗ | ಃ | ನಿವೃತ್ತ ಪೌರಾಯುಕ್ತರು , | ದಿನಾಂಕಃ 16.01.2019 |
| ವಾಸಸ್ಥಳ | ಃ | ದಾವಣಗೆರೆ . | |

## ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ

ದಿಃ 28.07.2014 ರಿಂದ 03.05.2016 ರವರೆಗೆ ನಾನು ಚಿತ್ರದುರ್ಗದ ನಗರಸಭೆಯಲ್ಲಿ ಪೌರಾಯುಕ್ತರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಆರೋಪಿ ಹೆಂಡತಿ ಶ್ರೀಮತಿ ರಾಜೇಶ್ವರಿ ಹೆಸರಿನಲ್ಲಿ ಚಿತ್ರದುರ್ಗದ ಶಿಕ್ಷಕರ ಕಾಲೋನಿಯಲ್ಲಿ ಮನೆ ಇರುತ್ತದೆ. ಆ ಮನೆ ಖಾತೆ ನಂ. 10888 ಅಸೆಸ್ ಮೆಂಟ್ ನಂ. 18673/1 ರಲ್ಲಿ ಕೊಳವೆ ಬಾವಿ ತೆಗೆಸಿದ್ದಾರೆ. ಅದಕ್ಕೆ ಸಂಬಂಧಿಸಿದ ಹಾಗೆ ಲೋಕಾಯುಕ್ತ ಪೊಲೀಸರು ಕೆಲವು ಮಾಹಿತಿ ಕೇಳಿದ್ದರು . ಸದರಿ ಬೋರ್ ವೆಲ್ ಗೆ ಸಂಬಂಧಿಸಿದ ಹಾಗೆ ನಾನು ನಮ್ಮ ಕಚೇರಿ ದಾಖಲೆ ಪರಿಶೀಲಿಸಿರುತ್ತೇನೆ . ಆರೋಪಿ –2 ರಾಜೇಶ್ವರಿ ಇವರು ಕೊರೆಸಿದ ಕೊಳವೆ ಬಾವಿಗೆ ಸಂಬಂಧಿಸಿದ ಹಾಗೆ ನಮ್ಮ ಕಚೇರಿಯಲ್ಲಿ ಕೆಲಸ ಮಾಡುವ ಇಂಜಿನಿಯರ್ ಸ್ಥಳಕ್ಕೆ ಹೋಗಿ ಪರಿಶೀಲಿಸಿ ಒಂದು ವರದಿ, ಎಸ್ಟಿಮೇಟ್ ಕೊಟ್ಟಿರುತ್ತಾರೆ . ಅದನ್ನು ನಾನು ಲೋಕಾಯುಕ್ತ ಪೊಲೀಸರಿಗೆ ಹಾಜರು ಮಾಡಿರುತೇನೆ .

2. ಲೋಕಾಯುಕ್ತ ಪೋಲೀಸರು ನನಗೆ ದಿಃ 03.02.2015 ರಂದು ಬರೆದ ಪತ್ರ ಗುರುತಿಸುತ್ತೇನೆ . ಅದನ್ನು ನಿಪಿಃ 31 ಅಂತ ಗುರುತಿಸಲಾಯಿತು . ನಾನು ಕೊಟ್ಟಂತಹ ವರದಿ ಗುರುತಿಸುತ್ತೇನೆ . ಅದನ್ನು ನಿಪಿಃ 32 ಅಂತ ಗುರುತಿಸಲಾಯಿತು . ನಮ್ಮ

ಕಚೇರಿಯ ವಿಜಯ ಭಾಸ್ಕರ್ ಮತ್ತು ಶೃತಿ ಹೆಚ್. ಕೆ. ಇಂಜಿನಿಯರ್ ಕೊಟ್ಟಂತಹ ವರದಿ ಗುರುತಿಸುತ್ತೇನೆ . ಅದನ್ನು ನಿಪಿಃ 33 ಅಂತ ಗುರುತಿಸಲಾಯಿತು . ಆ ಸದರಿ ವರದಿ ಪ್ರಕಾರ ಆರೋಪಿ –2 ರಾಜೇಶ್ವರಿ ಇವರು ಬೋರ್ ವೆಲ್ ಹಾಕಲು ರೂ. 1,37,000/– ಖರ್ಚು ಮಾಡಿದ್ದಾರೆ ಅಂತ ಗೊತ್ತಾಯಿತು .

**ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

3. ಆರೋಪಿ –2 ರಾಜೇಶ್ವರಿ ಇವರ ಮನೆ , ಬೋರ್ ವೆಲ್ ನ್ನು ನಾನು ಖುದ್ದಾಗಿ ಪರಿಶೀಲಿಸಿಲ್ಲ . ಸದರಿ ವಿಜಯ ಭಾಸ್ಕರ್ ಮತ್ತು ಶೃತಿ ಇಂಜಿಯರ್ ಕೊಟ್ಟಂತಹ ವರದಿ ಮೇರೆಗೆ ನಾನು ನಿಪಿಃ 32 ವರದಿ ಕೊಟ್ಟಿದ್ದೇನೆ . ವಸ್ತು ಸ್ಥಿತಿ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ . ಆದರೆ ದಾಖಲೆ ನೋಡಿ ಸಾಕ್ಷಿ ಹೇಳಿದ್ದೇನೆ . ನಾನು ಖುದ್ದಾಗಿ ಸ್ಥಳಕ್ಕೆ ಹೋಗಿಲ್ಲ ಹೀಗಾಗಿ ಬೋರಿನ ಮೌಲ್ಯ ಹೇಳಲು ಬರುವುದಿಲ್ಲ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.